ವೇದಾವತಿ ಎಚ್.ಎಸ್.

# ತಾಯಿಯ ಮಮತೆ

ಅದೊಂದು ಹಳ್ಳಿ. ಆ ಹಳ್ಳಿಯಲ್ಲಿ ರಾಮು ಎಂಬ ಹುಡುಗನಿದ್ದ. ಅವನ ಕಾಯಕ ಹಸು ಮತ್ತು ಎಮ್ಮೆಗಳನ್ನು ಮೇಯಿಸುವುದಾಗಿತ್ತು. ರಾಮುವಿನ ಬಳಿಯಲ್ಲಿ ಗೌರಿ ಎಂಬ ಹಸುವಿತ್ತು. ಅದು ತುಂಬಾ ಮುದ್ದಾಗಿತ್ತು. ಗೌರಿ ಎಂದರೆ ರಾಮುವಿಗೆ ಎಲ್ಲಿಲ್ಲದ ಪ್ರೀತಿ. 'ಗೌರಿ ಎಲ್ಲಿದ್ದೀಯಾ? ಬಾ' ಎಂದು ಕರೆದರೆ ಅವನ ಧ್ವನಿಯನ್ನು ಕೇಳಿ ಎಲ್ಲಿದ್ದರೂ ಓಡಿ ಬರುತ್ತಿತ್ತು. ಗೌರಿಯು ರಾಮುವಿನೊಂದಿಗೆ ಆಟವನ್ನೂ ಆಡುತ್ತಿತ್ತು.

ಒಮ್ಮೆ ಗೌರಿಯು ಮುದ್ದಾದ ಕರುವಿಗೆ ಜನ್ಮ ನೀಡಿದಳು. ರಾಮು ಆ ಕರುವಿಗೆ ಗಂಗೆಯೆಂದು ಹೆಸರಿಟ್ಟನು. ಒಂದು ದಿನ ರಾಮು, ಹಸು ಮತ್ತು ಎಮ್ಮೆಗಳನ್ನು ಮೇಯಿಸಲು ಬೆಟ್ಟಕ್ಕೆ ಹೋಗಿದ್ದ. ಅವನಿಗೆ ಅಂದು ಆರೋಗ್ಯ ಸರಿಯಿಲ್ಲದ ಕಾರಣ ಹಸು ಮತ್ತು ಎಮ್ಮೆಗಳನ್ನು ಮೇಯಲು ಬಿಟ್ಟು ತಾನು ಒಂದು ಮರದಡಿಯಲ್ಲಿ ಮಲಗಿ ನಿದ್ದೆ ಮಾಡಿದ.

